"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿಯುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಎಶ್ವನಾಥ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ.

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

ಅಧ್ಯಕ್ಷರು: ಇವತ್ತಿನ ಕಾರ್ಯಕ್ರಮಗಳೆಲ್ಲ ಮುಗಿದವು.

ಶ್ರೀ ಪಿ.ಟಿ.ಪರಮ್. ಸಿಂಧ್ಯ: ಇನ್ನೇನಾದರೂ ಕಾರ್ಯಕಪಾಲಗಳು ಇದೆಯೇ?

ಅಧ್ಯಕ್ಷರು: ಇಲ್ಲ ಕಾರ್ಯಕಲಾಪಗಳೇನೂ ಇಲ್ಲ.

ಶ್ರೀ ಪಿ.ಟಿ.ಪರಮ್. ಸಿಂಧ್ಯ: ಹಾಗಾದರೆ ದಯಮಾಡಿ ನನಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು ಹೇಳಿ.

ಶ್ರೀ ಬಿ. ಶ್ರೀರಾಮುಲು: ಅಸೆಂಬ್ಲಿ ಮುಕ್ತಾಯವಾಗುತ್ತದೆ, ಸ್ಪೀಕರ್ ಮತ್ತು ಪಾರ್ಲಿಮೆಂಟರಿ ಮಿನಿಸ್ಟರ್ ಇಬ್ಬರೂ ಇರಬೇಕಾಗುತ್ತದೆ ಅವರು ಕೆಲವೊಂದು ವಿಚಾರಗಳನ್ನು ಹೇಳಬೇಕಾಗುತ್ತದೆ.

ಶ್ರೀ ಪಿ.ಟಿ.ಪರಮ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕಾಯುವುದಕ್ಕೆ ಆಗುವುದಿಲ್ಲ. ಬೇಕಾದರೆ ಕರೆಸಿಕೊಳ್ಳಲಿ.

ಅಧ್ಯಕ್ಷರು: ಈಗ ತಾವು ಏನು ಹೇಳುತ್ತೀರಿ ಹೇಳಿ.

ಅ. ವಿಧಾನ ಸಭೆ ಅಧ್ಯಕ್ಷರಿಗೆ ಅಭಿನಂದನೆಗೆ ಪಲ್ಲಿಸುವ ಪ್ರಸ್ತಾವ

†ಶ್ರೀ ಪಿ.ಟಿ.ಪರಮ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನ ಮುಗಿಯುತ್ತಾ ಇದೆ, ಸರಸ ಕಳೆದ ಶನಿವಾರದಿಂದ ಮುಗಿಯುತ್ತದೆ, ಮುಗಿಯುತ್ತದೆ, ಎಂದುಕೊಂಡಿದ್ದೆವು ಸದನದ ಅಧಿವೇಶನ ಮುಗಿಯತಕ್ಕಂಥದ್ದಲ್ಲ. ಈ ಸಾರಿ ವಿಧಾನ ಸಭೆಯ ಜೀವವೂ ಸಹಿತ ಮುಗಿಯುತ್ತದೆ ಎನ್ನುವ ಅನುಮಾನ ನಮ್ಮ ಅನೇಕ ಮಾನ್ಯ ಸದಸ್ಯರಲ್ಲಿ ಇದೆ. ಬಹುಶಃ ಆ ಅನುಮಾನ ಇಲ್ಲದೇ ಹೋಗಿದ್ದರೆ ಇಷ್ಟೊಂದು ನೀರಸವಾಗಿ ಈ ಅಧಿವೇಶನ ನಡೆಯುತ್ತಿರಲಿಲ್ಲ. ಈ ಅಧಿವೇಶನ ಇನ್ನೂ ಜೀವಂತವಾಗಿ ನಡೆಯುತ್ತಿತ್ತು. ಇದು ಕೇವಲ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬೆನ್ನನ್ನು ತಾವೇ

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ